(ಈ) ಕಾರ್ಮಿಕರು ಹಾಗೂ ಅವರ ಸಂಬಂಧಿಗಳಿಗೆ ಮನರಂಜನೆ ಹಾಗೂ ತರಬೇತಿ ಕೊಡುವ ಸಲುವಾಗಿ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಕಲ್ಯಾಣ ನಿಧಿಯು ಈ ಕೇಂದ್ರಗಳನ್ನು ನಡೆಸಲು ಮತ್ತು ವಿದ್ಯಾರ್ಥಿವೇತನ ವೈದ್ಯಕೀಯ ಸೌಲಭ್ಯ ಹಾಗೂ ಮಂಡಳಿಯ ಒಪ್ಪಿಗೆ ಪಡೆದ ಮತ್ತಿತರ ಕಾರ್ಯಕ್ರಮಗಳನ್ನು ನಡೆಸಲು ವಿನಿಯೋಗವಾಗುತ್ತಿದೆ.

## ಚುಕ್ಕೆ ಗುರುತಿಲ್ಲದ ಪಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರಿ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ಪಟ್ಟಿಯನ್ನು ಸಭೆಯ ಮುಂದಿಡಲಾಗಿದೆ.

## ರಾಜ್ಯದಲ್ಲಿ ಮುಚ್ಚಿರುವ ಹತ್ತಿ ಗಿರಣಿಗಳು

೧೯. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಮುಚ್ಚಲ್ಪಟ್ಟಿರುವ ಹತ್ತಿ ಗಿರಣಿಗಳ ಸಂಖ್ಯೆ ಎಷ್ಟು ಮತ್ತು ಎಷ್ಟು ಕಾಲಾವಧಿಯಿಂದ ಮುಚ್ಚಲ್ಪಟ್ಟಿದೆ ? ಹಾಗೂ ಇದರಿಂದ ಉದ್ಯೋಗ ಕಳೆದುಕೊಂಡಿರುವ ನೌಕರರ ಸಂಖ್ಯೆ ಎಷ್ಟು ?

(ಆ) ಈ ಗಿರಣಿಗಳನ್ನು ಪುನಃ ಪ್ರಾರಂಭಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿತಳುಃ.—

(ಅ) ನಾಲ್ಕು ರಾಜ್ಯದಲ್ಲಿ ಯಾವ ಹತ್ತಿ ಗಿರಣಿಗಳೂ ಪೂರ್ಣವಾಗಿ ಮುಚ್ಚಿರುವುದಿಲ್ಲ. ಕೆಲವು ಬೀಗ ಮುದ್ರೆ ಕಾರಣ ಅಥವಾ ಲೇ ಆಫ್ ಕಾರಣ ಅಥವಾ ಮುಷ್ಕರದ ಕಾರಣ ಕೆಲಸ ಮಾಡುತ್ತಿಲ್ಲ. ಆದುದರಿಂದ ಅಲ್ಲಿನ ಕೆಲಸಗಾರರು ಕೆಲಸ ಕಳೆದುಕೊಂಡಿದ್ದಾರೆಂದು ಹೇಳುವಂತಿಲ್ಲ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

## ರಾಜ್ಯದ ಡಚ್ ಮಾದರಿಯ ನೇಕಾರಿಕಾ ವಸತಿ ಹಾಗೂ ಕಾರ್ಯಾಗಾರಗಳ ಬಗ್ಗೆ

೭೦. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).— ಮಾನ್ಯ ಸಣ್ಣ ಪ್ರಮಾಣದ ರಾಜ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಡಚ್ ಮಾದರಿಯ ನೇಕಾರಿಕಾ ವಸತಿ ಹಾಗೂ ಕಾರ್ಯಾಗಾರಗಳು ಎಷ್ಟು ಇರುವುವು (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು).

(ಆ) ರೋಣ ತಾಲ್ಲೂಕ್ ಗಜೇಂದ್ರಗಡ ಬಹುಜನ ನೇಕಾರರ ನಗರವೆನ್ನುವುದು ಸರಕಾರದ ಗಮನಕ್ಕೆ ಬಂದಿದೆಯೆ,

(ಇ) ಹಾಗಿದ್ದಲ್ಲಿ, ಡಚ್ ಮಾದರಿಯ ನೇಕಾರಿಕಾ ವಸತಿ ಹಾಗೂ ಕಾರ್ಯಾಗಾರ ಸ್ಥಾಪಿಸುವಲ್ಲಿ ಯಾವ ಕ್ರಮ ಕೈಕೊಳ್ಳಲಾಗಿದೆ.

(ಈ) ಹಾಗಿಲ್ಲದಿದ್ದಲ್ಲಿ ಬೇಡಿಕೆಯ ತೀಪ್ರತೆಯನ್ನು ಅರಿತುಕೊಂಡು, ಡಚ ಮಾದರಿಯ ನೇಕಾರಿಕಾ ವಸತಿ ಹಾಗೂ ಕಾರ್ಯಾಗಾರ ಸ್ಥಾಪನೆಯನ್ನು ತೀವ್ರವಾಗಿ ಪರಿಶೀಲಿಸಲಾಗುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಮಂತ್ರಿಗಳು).—

(ಅ) ವಸತಿ ಹಾಗೂ ಕಾರ್ಯಾಗಾರಗಳು ೧೯೬೬

ಸಾಮೂಹಿಕ ನೇಯ್ಗೆ ಕೇಂದ್ರಗಳು ೯

(ಜಿಲ್ಲಾವಾರ ಮಾಹಿತಿಯನ್ನು ಲಗತ್ತಿಸಿದೆ)

(ಆ) ಹೌದು